ಆ) ಹಾಗಿದ್ದಲ್ಲಿ ವಿಭಾಗೀಯ ಕಛೇರಿಗೆ ನೂತನ ಕಟ್ಟಡ ಕಟ್ಟಿಸಲು ಸರ್ಕಾರದವರು ನಿರ್ಧರಿಸಿರುವರೇ? ಹಾಗಿದ್ದಿದ್ದಲ್ಲಿ ಎಷ್ಟು ಕಾಲದಲ್ಲಿ ಈ ಕಟ್ಟಡದ ನಿರ್ಮಾಣ ಮಾಡಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಗದಗ್ ವಿಭಾಗೀಯ ಕಾರ್ಯಾಲಯಗಳು ಲೋಕೋಪಯೋಗಿ ಇಲಾಖೆಗೆ ಸೇರಿದ ಪರಿವೀಕ್ಷಣ ಮಂದಿರ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸದರಿ ಕಟ್ಟಡವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ ಮತ್ತು ಲೋಕೋಪಯೋಗಿ ಇಲಾಖೆಯು ನಿಗದಿಪಡಿಸಿರುವ ಸದರಿ ನಿವೇಶನ ಮತ್ತು ಕಟ್ಟಡಗಳ ಮೌಲ್ಯ ರೂ. 16,87,050-00 ಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ವಿಷಯ:- ಕುಂದಾಪುರ ತಾಲ್ಲೂಕು ಶಂಕರನಾರಾಯಣ ಗ್ರಾಮದಲ್ಲಿ ಕೃಷಿ ಇಲಾಖೆಯ ಕಟ್ಟಡ

1140 (1633) **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):-** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಶಂಕರನಾರಾಯಣ ಗ್ರಾಮದಲ್ಲಿ ಹಿಂದೆ ಕೃಷಿ ಇಲಾಖೆಯವರು ಕಟ್ಟಿಸಿದ ಕಟ್ಟಡವನ್ನು ಕೃಷಿ ಇಲಾಖೆ ಸ್ವಾಧೀನ ಪಡಿಸಿಕೊಳ್ಳದಿರಲು ಕಾರಣವೇನು?

ಆ) ಕೃಷಿ ಇಲಾಖೆಯವರ ನಿರ್ಲಕ್ಷತನದಿಂದ ಲಕ್ಷಾಂತರ ರೂ. ವೆಚ್ಚದಲ್ಲಿ ಕಟ್ಟಲಾದ ಕಟ್ಟಡ ಉಪಯೋಗಕ್ಕೆ ಬಾರದೇ ಇರುವುದು ನಿಜವೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):-

ಅ) ವಸತಿ ಗೃಹದ ನಿರ್ಮಾಣ ಕಾರ್ಯವನ್ನು ರಾಜ್ಯ ಲೋಕೋಪಯೋಗಿ ಇಲಾಖೆಯು ಕೈಗೆತ್ತಿಕೊಂಡಿದ್ದು ಅದನ್ನು ಕೃಷಿ ಇಲಾಖೆಗೆ ಇದುವರೆವಿಗೂ ಹಸ್ತಾಂತರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಕುಂದಾಪುರ ತಾಲ್ಲೂಕಿನಲ್ಲಿ ಹಿಂದೆ ಮಂಜೂರಾದ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಲ್ಲಿ ಅವ್ಯವಹಾರ.

1141 (1519) **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಹಿಂದೆ ಮಂಜೂರಾದ ಆಶ್ರಯ ಮತ್ತು ಅಂಬೇಡ್ಕರ್ ಮನೆಗಳಲ್ಲಿ ಅವ್ಯವಹಾರ ಆಗಿರುವುದು ನಿಜವೇ?

ಆ) ಈ ಬಗ್ಗೆ ಉಪವಿಭಾಗಾಧಿಕಾರಿಯವರಿಂದ ತನಿಖೆಯಾಗಿರುವುದು ನಿಜವೇ?

ಇ) ಉಪವಿಭಾಗಾಧಿಕಾರಿಯವರಿಂದ ತನಿಖೆಗಾಗಿ ಬಂದ ಮೇಲೂ ಆಪಾದಿತರನ್ನು ಅಮಾನತ್ತಿನಲ್ಲಿಡಲು ಕಾರಣವೇನು?

ಶ್ರೀ ಎಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಹೌದು.

ಆ) ಹೌದು.

ಇ) ಈ ಪ್ರಕರಣದಲ್ಲಿ ಆರ್ಥಿಕ ಅವ್ಯವಹಾರದಲ್ಲಿ ಒಂದಕ್ಕಿಂತ ಹೆಚ್ಚು ನೌಕರರು ಒಳಗೊಂಡಿರುವುದರಿಂದ 1957ರ ಕರ್ನಾಟಕ ನಾಗರೀಕ ಸೇನಾ (ಸಿ.ಸಿ.ಎ) ನಿಯಮಗಳ ನಿಯಮ 13ರಂತೆ ಜಂಟಿ ವಿಚಾರಣೆಯಾಗಬೇಕಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಯಾರನ್ನು ಅಮಾನತ್ತಿನಲ್ಲಿಟ್ಟಿಲ್ಲ.

ವಿಷಯ:- ಭೂ ನ್ಯಾಯ ಮಂಡಳಿ ಪ್ರಕರಣಗಳು.

1143 (1945) **ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಭೂ ಸುಧಾರಣೆಗೆ ಸಂಬಂಧಪಟ್ಟಂತೆ ಎಷ್ಟು ಪ್ರಕರಣಗಳು ಭೂ ನ್ಯಾಯ ಮಂಡಳಿಯಲ್ಲಿ ಇತ್ಯರ್ಥವಾಗದೇ ಬಾಕಿ ಇವೆ (ಜಿಲ್ಲಾವಾರು ವಿವರ ನೀಡುವುದು).

ಆ) ಹೈಕೋರ್ಟಿನಿಂದ ಭೂ ನ್ಯಾಯಮಂಡಳಿಗೆ ವಾಪಸ್ಸು ಬಂದ ಅರ್ಜಿಗಳೆಷ್ಟು?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಇವೆ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

19,005 ಪ್ರಕರಣಗಳು

1.	ದಕ್ಷಿಣ ಕನ್ನಡ	2127
2.	ರಾಯಚೂರು	460
3.	ಗುಲ್ಬರ್ಗಾ	152
4.	ಮೈಸೂರು	456
5.	ಧಾರವಾಡ	1021
6.	ಹಾಸನ	101
7.	ಕೊಡಗು	29
8.	ಮಂಡ್ಯ	841